ನೋಡಿಕೊಂಡು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇವತ್ತು ಚರ್ಚೆಗೆ ಉತ್ತರವನ್ನು ಕೊಡುವುದಾ ಬೇಡವಾ ಎಂದು.

ಶ್ರೀ ಡಿ.ವಿ.ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ತಾವು ಸಮಯವನ್ನು ನಿಗದಿ ಮಾಡಿದರೆ ಏನಾಗುತ್ತದೆಂದರೆ ನಮ್ಮಲ್ಲಿ ಮಾತನಾಡುವವರು ಎಷ್ಟು ಜನ ಇದ್ದರೂ ನಾವು ಆ ಸಮಯವನ್ನು ಅಲಾಟ್ ಮಾಡಿಕೊಂಡು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಈಗ ತಾವು ಇವತ್ತು ಬಿಜೆಪಿಗೆ ಇಷ್ಟು ಸಮಯವನ್ನು ಕೊಡುತ್ತೀರೆಂದರೆ ನಮ್ಮಲ್ಲಿ ಇರುವಂತಹ ನಾಲ್ಕೈದು ಜನರು 10-15 ನಿಮಿಷಗಳು ಎಂದು ನಿಗದಿ ಮಾಡಿಕೊಂಡು ಮಾತನಾಡಲು ಸಾಧ್ಯವಾಗುತ್ತದೆ. ಅದರಲ್ಲಿ ಪ್ರಮುಖರಾದಂಥವರು ಸ್ವಲ್ಪ ಜಾಸ್ತಿ ಸಮಯವನ್ನು ತೆಗೆದುಕೊಳ್ಳಬಹುದು, ಇನ್ನು ಬಾಕಿ ಇರುವವರು ನಿಗದಿತ ಸಮಯದಲ್ಲಿ ಮಾತನಾಡುವಂತಹ ವ್ಯವಸ್ಥೆಯನ್ನು ಮಾಡಬಹುದು. ಆದಕಾರಣ ತಾವು ನಮಗೆ ಸಮಯವನ್ನು ನಿಗದಿ ಮಾಡಿ ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಆಯಿತು ಹೇಳುತ್ತೇವೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

೩) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗಂಗೊಳ್ಳಿ ಸರ್ವಋತು ಬಂದರಿನ ಕುರಿತು

(271): 2886

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಮಿನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗೊಳ್ಳಿ ಸರ್ವಋತು ಬಂದರಿಗೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಎಂದು ಕಳುಹಿಸಲಾಯಿತು;

ಆ) ಅದಕ್ಕೆ ಕೇಂದ್ರದಿಂದ ಅನುಮೋದನೆ ದೊರಕಿದೆಯೇ?

ಶ್ರೀ ಬಿ.ರಮಾನಾಥ ರೈ (ಮಿನುಗಾರಿಕೆ, ಬಂದರು ಮತ್ತು ಪ್ರದೇಶ ಅಭಿವೃದ್ಧಿ ಸಚಿವರು):

ಅ) ದಿನಾಂಕ 9-3-1999.

ಆ) ಹೌದು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರದಿಂದ ಸರ್ವಋತು ಬಂದರಿಗೆ ಅನುಮೋದನೆ ಸಿಕ್ಕಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಈ ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ ಇದಕ್ಕೂ ಮುಖ್ಯವಾಗಿ ಗಂಗೊಳ್ಳಿ ಅಳಿವೆಯಲ್ಲಿ ಹೂಳು ತುಂಬಿ ಆಗಿಂದಾಗ್ಗೆ ದುರಂತಗಳಾಗಿ ಮೀನುಗಾರರು ದುರ್ಮರಣಕ್ಕೆ ಈಡಾಗುವಂತಹ ಪ್ರಸಂಗವಿದೆ. ಅದಕ್ಕೋಸ್ಕರ ಸೈಮೆಲ್ಟೇನಿಯಸ್ ಆಗಿ ಕಾಮಗಾರಿಗಳನ್ನು ಯಾವಾಗ ತೆಗೆದುಕೊಳ್ಳುತ್ತೀರೋ ಆಗ ಇದನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಗಂಗೊಳ್ಳಿ ಮೀನುಗಾರಿಕೆ ಬಂದರಿಗೆ ಈ ಸಾಲಿನಲ್ಲಿ ಕಾಮಗಾರಿ ಪ್ರಾರಂಭಿಸಲು ಅನುಮೋದನೆ ದೊರೆತಿದೆ. ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಮಾನ್ಯ ಸದಸ್ಯರು ಹೂಳು ಎತ್ತುವಂತಹ ಕೆಲಸವಾಗಬೇಕೆಂದು ಹೇಳಿದ್ದಾರೆ. ಅದಕ್ಕೂ ಆದ್ಯತೆಯನ್ನು ಕೊಟ್ಟು ಈ ಬಂದರು ಕೆಲಸವಾಗುವಂತಹ ಸಂದರ್ಭದಲ್ಲಿ ಹೂಳು ಎತ್ತುವಂತಹ ಕಾರ್ಯಕ್ರಮದ ಬಗ್ಗೆಯೂ ನಾವು ಗಮನಹರಿಸುತ್ತೇವೆಂದು ಹೇಳಲಿಚ್ಚಿಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೆ, ಗಂಗೊಳ್ಳಿ ಬಂದರಿನ ರೀತಿಯಲ್ಲಿ ಇನ್ನಿತರ ಬಂದರುಗಳು ಕಾಮಗಾರಿಗಳು ಸ್ಥಗಿತವಾಗಿದೆ. ಈಗ ನನ್ನ ಕ್ಷೇತ್ರದ ಎಜ್ಜಾಡಿಯಲ್ಲಿ ಬಂದರು ಕಾಮಗಾರಿ ಪ್ರಾರಂಭವಾಗಿ ಒಂದು ವರ್ಷವಾಯಿತು. ಶ್ರೀ ಜಯಪ್ರಕಾಶ್ ಹೆಗಡೆಯವರ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಮಾಡಿದ್ದು ನಾನು ಮೀನುಗಾರಿಕೆಯ ಸಚಿವನಾಗಿದ್ದಾಗ ಇದರ ಪ್ರಪೋಸಲ್ ಕಳುಹಿಸಿ ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ವರ್ಷದ ಹಿಂದೆ ಈಗಾಗಲೇ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದರೂ, ಕೆಲಸ ನಿಂತು ಹೋಗಿದೆ. ಆದುದರಿಂದ ತಮ್ಮ ಮುಖೇನ ಮಾನ್ಯ ಮಂತ್ರಿಯವರಲ್ಲಿ ವಿಜ್ಞಾಪನೆ ಮಾಡುವಂಥಾದ್ದು ಏನೆಂದರೆ ಆದಷ್ಟು ಬೇಗ ಎಜ್ಜಾಡಿ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡಬೇಕು, ಅದೇ ರೀತಿಯಲ್ಲಿ ರಾಜ್ಯದ ಇನ್ನಿತರ ಬಂದರುಗಳು ಎಂದರೆ ಇವತ್ತು ಮಲ್ಪೆ ಮೀನುಗಾರಿಕೆ ಬಂದರಿನ ಕೆಲಸ ನಿಂತು ಹೋಗಿದೆ, ಇದೇ ರೀತಿಯಲ್ಲಿ ಬೇರೆ ಬೇರೆ ಬಂದರುಗಳ ಕೆಲಸಗಳು ನಿಂತುಹೋಗಿದೆ. ಆದುದರಿಂದ ಈ ಬಗ್ಗೆ ತಮ್ಮ ಮುಖೇನ ಮಾನ್ಯ ಮಂತ್ರಿಯವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ರಮಾನಾಥ್ ರೈ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಇರುವ ಮೀನುಗಾರಿಕಾ ಬಂದರುಗಳಲ್ಲಿ ಈಗ ಮಲ್ಪೆ ಬಂದರು ಇರಬಹುದು, ಬ್ರಹ್ಮಾವರದಲ್ಲಿರುವಂತಹ ಬಂದರು ಇರಬಹುದು, ಇವುಗಳ ಕಾಮಗಾರಿಗಳು ಪ್ರಗತಿಯಲ್ಲಿದೆ. ಆದಷ್ಟು ಶೀಘ್ರದಲ್ಲಿ ಇದರ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇನ್ನು ಎಜ್ಜಾಡಿ ಬಂದರಿನ

ಸಮಸ್ಯೆ ಏನೆಂದರೆ ಅಲ್ಲಿ ಒಂದು ರಸ್ತೆ ಬಂದಿದೆ, ಫ್ಲೋಯಿಂಗ್ ವಾಟರ್ ಫ್ಲೋ ಆಗುತ್ತಿಲ್ಲ ಮರಳು ನಿಂತಿದೆ. ಇದನ್ನು ತೆಗೆದು ಈ ಕಾಮಗಾರಿಯನ್ನು ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಅಲ್ಲಿ ನಬಾರ್ಡ್‌ದಿಂದ ಒಂದು ಸೇತುವೆ ಆಗುತ್ತಿದೆ. ಈ ಸೇತುವೆ ಬಗ್ಗೆಯೂ ನಾವು ನೀವು ಒಟ್ಟಿಗೆ ಇದರ ಕೆಲಸವಾಗುವ ಬಗ್ಗೆ ಪ್ರಯತ್ನ ಮಾಡೋಣ. ಇದರ ಜೊತೆಗೆ ಆದಷ್ಟು ಶೀಘ್ರವಾಗಿ ಡ್ರೆಜಿಂಗ್ ಮಾಡಿದ ತಕ್ಷಣ ಈ ಕಾಮಗಾರಿ ಪ್ರಗತಿಯನ್ನು ಮಾಡುತ್ತೇವೆ.

ಶ್ರೀ ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೆ, ಈ ಡ್ರೆಜಿಂಗ್ ಕಾಮಗಾರಿಗೂ ಈ ಸೇತುವೆಗೂ ಏನು ಸಂಬಂಧವಿಲ್ಲ. ಇವು ಸೇತುವೆ ಮೇಲೆ ಆಗುವಂತಹದ್ದು ಅದು ರಸ್ತೆ ಇರಬಹುದು ಡ್ರೆಜಿಂಗ್ ವಾಟರ್ ಇರಬಹುದು. ಸ್ಟ್ರಕ್ಚರ್ ಇರಬಹುದು. ಇದಕ್ಕೂ ಸಮುದ್ರಕ್ಕೂ ಏನು ಕನೆಕ್ಷನ್ ಇಲ್ಲ ಇದು ಏಕೆ ನಿಂತು ಹೋಗಿದೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಶೇ.75ರಷ್ಟು ಕೆಲಸವಾಗಿದೆ, ಇನ್ನು ಸ್ವಲ್ಪ ಕೆಲಸ ಬಾಕಿ ಉಳಿದಿದೆ. ಅದನ್ನು ಆದಷ್ಟು ಶೀಘ್ರವಾಗಿ ಮುಗಿಸುತ್ತೇವೆ. ಇದು ಜನರ ಉಪಯೋಗಕ್ಕೆ ಬರಬೇಕೆಂದರೆ ಡ್ರೆಜಿಂಗ್ ಬಹಳ ಅಗತ್ಯವಿದೆ. ಈ ಸೇತುವೆ ಮತ್ತು ಡ್ರೆಜಿಂಗ್ ಮಾಡುವಾಗ ಎಲ್ಲಾ ಕೆಲಸಗಳು ಪೂರ್ತಿಯಾಗುತ್ತದೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ನೀಡುತ್ತೇವೆ.

ಶ್ರೀ ವಸಂತ ವಿ.ಸಾಲಿಯಾನ: ಎಜ್ಜಾಡಿ ಬಂದರಿಗೋಸ್ಕರ ಹಣ ಎಷ್ಟು ಇದೆ? ತಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ಬಿ.ರಮಾನಾಥ ರೈ: ಇದಕ್ಕೆ ಇಪ್ಪತ್ತೆಂಟು ಲಕ್ಷ ರೂಪಾಯಿಗಳು ಇದೆ. ಆದಷ್ಟು ಶೀಘ್ರದಲ್ಲಿ ಈ ಕೆಲಸವನ್ನು ಪೂರ್ತಿ ಮಾಡುತ್ತೇವೆ. ಮೊದಲು ಡ್ರೆಜಿಂಗ್ ಮಾಡಿ ಸೇತುವೆ ಮಾಡಿ ಆದಷ್ಟು ಬೇಗ ಇದನ್ನು ಉಪಯೋಗಕ್ಕೆ ನೀಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಗಂಗೊಳ್ಳಿ ಸರ್ವಋತು ಬಂದರಿಗೆ ಸಂಬಂಧಪಟ್ಟ ಹಾಗೆ ತಗಲಬಹುದಾದ ಒಟ್ಟು ವೆಚ್ಚ ಎಷ್ಟು? ಅದರಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ನಿರೀಕ್ಷೆ ಮಾಡುತ್ತಿದ್ದೀರಿ? ರಾಜ್ಯ ಸರ್ಕಾರದಿಂದ ಎಷ್ಟು ಅನುದಾನವನ್ನು ಕೊಡಬಹುದೆನ್ನುವಂಥಾದ್ದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ ಯಾವುದೇ ರೀತಿಯಲ್ಲಿ ಹೂಳೆತ್ತುವಂತಹ ಕೆಲಸವನ್ನು ಮಾಡುವಾಗ ತಡೆಗೋಡೆಯನ್ನು ನಿರ್ಮಾಣ ಮಾಡದೇ ಮಣ್ಣು ತೆಗೆಯುವಂತಹ ಕೆಲಸವನ್ನು ಮಾಡಿದರೆ ಅದು ಪುನಃ ಅಲ್ಲೆ ಸೇರುವಂತಹ ಸಾಧ್ಯತೆ ಇದೆ. ಇದಕ್ಕೆ ಹಲವಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈಗಾಗಲೇ ನಮ್ಮ ಮಂಗಳೂರು ಬಂದರಿನಲ್ಲಿ ವೇಸ್ಟಾಗಿದೆ. ಆದುದರಿಂದ ಈ ತಡೆಗೋಡೆಯನ್ನು

ನಿರ್ಮಾಣ ಮಾಡಿ ಹೂಳೆತ್ತುವಂತಹ ಕೆಲಸವನ್ನು ಮಾಡುತ್ತೀರಾ? ಮತ್ತೆ ಅರ್ಧದಲ್ಲೇ ನಿಂತಿರುವಂತಹ ಕಾಮಗಾರಿಯನ್ನು ಪೂರ್ತಿಗೊಳಿಸುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಬಿ.ರಮಾನಾಥ್ ರೈ: ಮಾನ್ಯ ಅಧ್ಯಕ್ಷರೆ, ಸರ್ವಋತು ಮೀನುಗಾರಿಕೆ ಬಂದರಿಗೆ ಎಂಟು ಕೋಟಿ ಮೂವತ್ತೆರಡು ಲಕ್ಷ ರೂಪಾಯಿಗಳು ಮಂಜೂರು ಆಗಿದೆ. ಇದರಲ್ಲಿ ಕೇಂದ್ರಸರ್ಕಾರದ್ದು ಶೇ. 50ರಷ್ಟು ರಾಜ್ಯ ಸರ್ಕಾರದಿಂದ ಶೇ.50ರಷ್ಟು ಹಣ ನೀಡುವಂತಹ ಯೋಜನೆಯಾಗಿದೆ, ಮತ್ತೆ ಇದರ ಬಗ್ಗೆ ಆತಂಕಪಡುವಂಥಾದ್ದು ಏನೂ ಇಲ್ಲ. ಇದು ಹೊಸದಾಗಿ ಮಾಡುವಂತಹ ಕಾಮಗಾರಿಯಾಗಿದೆ. ಇದನ್ನು ಯಾವುದೇ ತೊಂದರೆಯಾಗದ ರೀತಿಯಲ್ಲಿ ನಿರ್ಮಾಣ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಉತ್ತರ ಬರುತ್ತದೆಯೋ, ಇಲ್ಲವೋ, ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ? ಏಕೆಂದರೆ ಈ ವಿಷಯ ಗಂಭೀರವಾಗಿದೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ: 272 (2998) ನನ್ನ ಕಚೇರಿಗೆ ಮೊನ್ನೆ 18ನೇ ತಾರೀಖು ಬಂದಿದೆ. ತಾವು ರೂಲ್ 41ಗಮನಿಸಿದರೆ, ನಮಗೆ ಪ್ರಶ್ನೆ ಸರಿ ಇದೆಯೋ ಇಲ್ಲವೋ ಎಂದು ನೋಡಿಕೊಳ್ಳುವುದಕ್ಕೆ 10 ದಿವಸ ಸಮಯ ಬೇಕಾಗುತ್ತದೆ. ಈ ಪ್ರಶ್ನೆಯಲ್ಲಿ ಗಂಭೀರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ನಾನು ಅನಿವಾರ್ಯ ಕಾರಣದಿಂದ ಈ ಪ್ರಶ್ನೆಯನ್ನು ಅಪ್ರೂವ್ ಮಾಡುವುದಕ್ಕೆ ಸಾಧ್ಯ ಆಗಲಿಲ್ಲ. ನಮ್ಮ ಸೆಕ್ರೆಟರಿಯೇಟ್‌ನಿಂದ 12ನೇ ತಾರೀಖು ಹೋಗಿದೆ, ಆದರೆ 24ನೇ ತಾರೀಖಿಗೆ ಬಂದಿದೆ ಅಂದಿದ್ದಾರೆ. ಮತ್ತೆ ನಾನು ಕಂಡ ಇನ್ನೊಂದು ದೋಷವೇನೆಂದರೆ ಈ ಪ್ರಶ್ನೆ ತಮ್ಮಿಂದ ಆಡ್ಮಿಟ್ ಆದಮೇಲೆ ನಮಗೆ ಬರಬೇಕು. ಅದಕ್ಕೆ ಉತ್ತರ ತರಿಸಬೇಕಾಗುತ್ತದೆ. ಪೂರ್ವಬಾವಿಯಾಗಿ 10 ದಿವಸ ನೋಟೀಸ್ ಎಂದರೆ ಐದು ದಿವಸ ಮುಂಚೆ ನಮಗೆ ಬರಬೇಕಾಗುತ್ತದೆ. ಅದು ಹಾಗಾಗಲಿಲ್ಲ. ಆದರೆ ಇದೆಲ್ಲಾ ಆಗುವುದಕ್ಕೆ ಮುಂಚೆಯೇ ಇದು ಹೇಗೆ ಲಿಸ್ಟ್ ಆಯಿತು, ಇದು ಲಿಸ್ಟ್ ಆಗಕೂಡದು. It is very fundamental issue I am raising ಕಾರಣಾಂತರದಿಂದ ಇದು ಆಗಿದೆ.

ಅಧ್ಯಕ್ಷರು: ಆಯಾಯ ದಿವಸ ಮಂತ್ರಿಗಳಿಗೆ ಆಯಾಯ ಸಬ್ಜೆಕ್ಟ್‌ನಲ್ಲಿ ಪ್ರಶ್ನೆ ಕಳುಹಿಸುವಾಗ ಲಾಟ್‌ನಲ್ಲಿ ಬಂದಿರುತ್ತದೆ. ಅದನ್ನು ಲಿಸ್ಟ್ ಮಾಡಿ ಇಟ್ಟು ಬಿಡುತ್ತಾರೆ. ಉತ್ತರ ಬರದೆ ಇದ್ದರೆ ಮುಂದಕ್ಕೆ ಹೋಗುತ್ತದೆ.